ತುಂಬಾ ಹುಷಾರಾಗಿರಬೇಕು. ಅಪರಿಚಿತರು ಚಾಕಲೇಟು ಕೊಟ್ಟರೆ ತೆಗೆದುಕೊಳ್ಳಬಾರದು. ತಿನ್ನಲೇಬಾರದು. ಎಸೆದುಬಿಡಬೇಕು. ಹದ್ದುಗಳಿಂದ ಹುಷಾರಾಗಿರಬೇಕು, ಅವಕ್ಕೆ ದೊಡ್ಡದೊಡ್ಡ ಕೊಕ್ಕಿರುತ್ತದೆ. ಕೊಕ್ಕಿನಲ್ಲಿ ಕಚ್ಚಿಕೊಂಡು ಹೋಗಿ ತಿಂದು ಬಿಡುತ್ತವೆ. ಮೈತುಂಬಾ ಬಟ್ಟೆ ತೊಟ್ಟು ಕೊಳ್ಳಬೇಕು...' ಹೀಗೆ ತಾಯಿ ಮಗುವಿಗೆ ಹೇಳುತ್ತಿದ್ದರೆ, ಮಗು ಕಣ್ಣರಳಿಸಿಕೊಂಡು ಕುಳಿತು ಕೇಳುತ್ತಿತ್ತು. ತಂದೆ 'ಇದೆಲ್ಲಾ ಇವಳಿಗೆ ಎಲ್ಲಿ ಅರ್ಥವಾಗುತ್ತೇ ತುಂಬಾ ಪುಟ್ಟವಳು' ಎನ್ನುತ್ತಿದ್ದ.

'ಈ ವಯಸ್ಸಿನಲ್ಲಿ ತಲೆಯಲ್ಲಿ ಕುಳಿತರೆ ಮುಂದೆ ತಪ್ಪು ಮಾಡುವುದಿಲ್ಲ' ಎನ್ನುತ್ತಿದ್ದಳು ತಾಯಿ. ಈಗ ಹೈಸ್ಕೂಲು ಓದುತ್ತಿರಬೇಕು. ಖಾಲಿ ದೋಸೆ ತಿಂದವಳೇ 'ಅಪ್ಪಾ ಇದು ತುಂಬಾ ರುಚಿಯಾಗಿದೆ. ನನ್ನ ಡಬ್ಬಿಗೂ ಇದನ್ನೇ ತೊಗೊಂಡು ಹೋಗ್ತೀನಿ' ಎಂದು ಅವಳು ತಂದಿದ್ದ ಸ್ಟೀಲ್ ಡಬ್ಬಿಗೆ ಎರಡು ದೋಸೆ ತರಿಸಿಕೊಂಡು ತುಂಬಿಸಿಕೊಂಡಳು. ಅಪ್ಪನ ಮುಖದಲ್ಲೂ ಧನ್ಯತಾ ಭಾವ.

ಆ ದಿನ ಆಗ ತಾನೇ ಹೋಟೆಲಿನ ಬಾಗಿಲು ತೆರೆದಿತ್ತು. ಹೋಟೆಲು ತೆರೆಯುವ ಮೊದಲೇ ಮುಂದೆ ಬಹಳಷ್ಟು ಜನ ನಿಂತಿರುತ್ತಿದ್ದರು. ಅವರ ಮೊದಲ ಆದ್ಯತೆ ಕಾಫಿ. ಕೆಲವರು ಮಾತ್ರ ಇಡ್ಲಿ- ವಡೆ ತಿಂದು ಕಾಫಿ ಕುಡಿದರೆ ಬೆಳಗ್ಗೆ ಬರುತ್ತಿದ್ದ ಮಂದಿಯಲ್ಲಿ ಹೆಚ್ಚಿನವರು ಕಾಫಿ ಪ್ರಿಯರು. ಪಾಪ ಒಬ್ಬಳು ಭಿಕ್ಷುಕಿ. ಅವಳು ಮೂಕಿ. ಆಸೆಯಿಂದ ಬಾಗಿಲಲ್ಲಿ ನೋಡುತ್ತಾ ನಿಂತಿರುತ್ತಿದ್ದಳು. ನಮ್ಮ ಯಜಮಾನರೇನಾದರೂ ಇದ್ದರೆ, ಅವಳಿಗೆ ಎರಡು ಇಡ್ಲಿ ಕೊಡಿಸುತ್ತಿದ್ದರು. ಎಷ್ಟೋ ಸಲ ಅವಳು ಅವರಿವರು ಬಿಟ್ಟಿರುವುದನ್ನೇ ಮೃಷ್ಟಾನ್ನದಂತೆ ಮುಕ್ಕುತ್ತಿದ್ದಳು. ಯಾವತ್ತೂ ಒಳಗೆ ಬಂದವಳಲ್ಲ. ಆದರೆ ಒಂದು ದಿನ ಅವಳು ಧೈರ್ಯ ಮಾಡಿ ಆ ಮೇಜಿನ ಕುರ್ಚಿಯಲ್ಲಿ ಕುಳಿತಳು. ಕೈಯ್ಯಲ್ಲಿ ತುರುಕಿ ಇಟ್ಟುಕೊಂಡಿದ್ದ ದುಡ್ಡು ಕಾಣುವಂತೆ ಮೇಜಿನ ಮೇಲಿಟ್ಟಳು. ಯಾರಿಗೂ ಅವಳನ್ನು ಹೊರಗೆ ಹೋಗು ಎಂದು ಹೇಳುವ ಧೈರ್ಯವಿರಲಿಲ್ಲ. ಮಸಾಲೆ ದೋಸೆ ತಿಂದು, ಕಾಫಿ ಕುಡಿದು ಠೀವಿಯಿಂದ ದುಡ್ಡನ್ನು ಯಜಮಾನರ ಮುಂದೆ ಹಿಡಿದಳು. ಯಜಮಾನರು ನಿರಾಕರಿಸಿದರೂ ಅವಳು ಪಟ್ಟು ಹಿಡಿದು ಬಲವಂತವಾಗಿ ಅವರ ಕೈಯ್ಯಲ್ಲಿ ತುರುಕಿ ಹೋಗಿದ್ದಳು. ಭಲೇ ಇವಳ ಸ್ವಾಭಿಮಾನವೇ ಎಂದು ಮೇಜಿಗೆ ಏನೋ ಸಂತಸ.

ಇಂದಿನ ಮಾತು.

ನೆನಪಿನ ಬುತ್ತಿ ಬಿಚ್ಚಿ ಮೇಜು ಮಮ್ಮಲ ಮರುಗುತ್ತಿತ್ತು. ಕೆಳಗೆ ಹೋಟೆಲು ಪ್ರಾರಂಭವಾಗಿತ್ತು. ಕಿವಿಗೆ ಹ್ಯಾಂಡ್ಸ್ ಫ್ರೀ ಹಾಕಿಕೊಂಡು ತಮ್ಮ ಪ್ರಪಂಚದಲ್ಲಿ ಮುಳುಗಿರುವ ಯುವಕ-ಯುವತಿಯರ ಮುಂದೆ ಥರಥರದ ಖಾದ್ಯಗಳು ಅದೊಂದನ್ನೂ ನೋಡಿಯೇ ಇಲ್ಲ ಮೇಜು. ಅಲ್ಲಿ ಅದೇ ಮೇಜಿನ ಜಾಗದಲ್ಲಿ ಮತ್ತೊಂದು ಮೇಜು ಆಕ್ರಮಿಸಿಕೊಂಡಿತ್ತು. ಅದಕ್ಕೆ ಸುಂದರವಾದ ಮೇಲು ಹೊದಿಕೆ. ಮೇಜಿನ ಮೇಲೆ ಹೂದಾನಿ. ಬಾಟಲಿಗಳಲ್ಲಿ ನೀರು. ಕೇಳಲಿ ಬಿಡಲಿ, ಆಂಗ್ಲ ಮಂದ ಸಂಗೀತ ಮತ್ತು ಅತ್ಯಂತ ಕಡಿಮೆ ಬೆಳಕಿನ ದೀಪಗಳು. ಹಳೆಯ ಫ್ಯಾನುಗಳೆಲ್ಲಾ ಗುಜರಿಗೆ ಹೋಗಿ ಹವಾನಿಯಂತ್ರಿತ ಕೊಠಡಿ. ಅಲ್ಲಿ ಊಟವೂ ಒಂದು ವ್ಯವಹಾರವೇ ಹೊರತು ಆತ್ಮೀಯತೆಯಾಗಲೀ, ಪ್ರೀತಿಯಾಗಲೀ ಕಾಣಲಿಲ್ಲ. ಎಲ್ಲವೂ ಸುವ್ಯವಸ್ಥಿತ ಆದರೂ ಏನೋ ಕೊರತೆ. ಇನ್ನು ತನ್ನ ಪಾಡೇನು. ಈ ಮೂಲೆಯಲ್ಲಿ ಎಷ್ಟು ದಿನ? ತನ್ನ ಜೊತೆಯವರೆಲ್ಲ ಇಷ್ಟು ಹೊತ್ತಿಗೆ ಯಾವುದೋ ಒಲೆಯ ಜ್ವಾಲೆಗೆ ಬಲಿಯಾಗಿರುತ್ತಾರೆ. ಯಾರು ಹತ್ತಿರ ಬಂದರೂ ಮೇಜು ಬಲಿಪೀಠಕ್ಕೆ ಸಿದ್ಧವಾದ ಕುರಿಯಂತೆ ಮೌನವಾಗಿ ತಲೆ ತಗ್ಗಿಸಿ ನಿಂತಂತಿತ್ತು. ತನಗೆ ತಾನೇ ಸಮಾಧಾನ ಹೇಳಿಕೊಂಡಿತು. ಪರಿವರ್ತನೆ ಜಗದ ನಿಯಮವಲ್ಲವೇ? ಹಳೇ ನೀರು ಹೋಗಿ ಹೊಸ ನೀರು ಬರಬೇಕಲ್ಲವೇ? ಒಂದು ದಿನ ಇದ್ದಕ್ಕಿದ್ದಂತೆ ಹಳೆಯ ಯಜಮಾನರು ಅವರ ಜೊತೆ ಆ ಹೊಸ ವ್ಯವಸ್ಥಾಪಕ ಬಂದ. ಮೇಜಿಗೆ ಖುಷಿಯೋ ಖುಷಿ. ಅಬ್ಬಾ ಯಜಮಾನರನ್ನು ನೋಡಿ ಯುಗವೇ ಆಯಿತು ಎನಿಸಿರಬೇಕು. ಎಷ್ಟು ಸೊರಗಿ ಹೋಗಿದ್ದಾರೆ. ಪಾಪ ಸಾಲ-ಸೋಲ ಇರಬೇಕು. ತುಂಬಾ ಲಾಸ್ ಆಗಿರಬೇಕು. ಮೊದಲಾದರೆ ಲಕ್ಷಣವಾಗಿ ನೊಸಲಿನಲ್ಲಿ ಕಾಸಗಲ ಶ್ರೀಗಂಧ, ಅದರ ಮೇಲೆ ಕುಂಕುಮ ಇಟ್ಟುಕೊಂಡು ಪಂಚೆ, ಶರ್ಟು, ಹೆಗಲ ಮೇಲೊಂದು ವಲ್ಲಿ. ಈಗ ಹಳೆಯ ಪಂಚೆ, ಮಾಸಿದ ಶರ್ಟು ಧರಿಸಿದ್ದಾರೆ.